(c) whether the particulars requested by the Commission in respect of posts held by various castes and communities in the State Civil Service hes been furnished by Government.

SRI M. MALLIKARJUNASWAMY.—(Minister for Commnnity Development and Social Welfare.)

(a) No.

(b) As per G.O. No. SWD 81 SET 72 dated 8th August 1972 constituting the Commission the final report of the Commission is due by the 31st December 1973.

(c) Some of the departments are reported to have not sent the particulars to the Commission.

FINALISATION OF REPORT OF BACKWARD CLASSES COMMISSION

208 SRI PRABHAKAR TELKAR(Kalagi).—Will the Minister for Community Development and Social Welfare be pleased to state.

(a) whether the Backward Class Commission has submitted its interim report to the Goverament.

(b) it not, when the Commission is expected to finalise its report and present it to the Government.

(c) the number of sittings held by the Commission in Bangalore and outside.

SRI M. MALLIKARJUNASWAMY.—Minister for Community Development and Social Welfare)

(a) No.

(b) As early as possible.

(c) The Commission held 16meetings as follows.—

In Bangalore	...	16
Outside	...	Nil

SRI K. SIDDAIAH.—Which are those departments which have not furnished information called for from the Commission ?

†ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ. ಸಾಮಾನ್ಯವಾಗಿ ಯಾವ ವಿಷಯಂಗಳ ಮೇಲೆ ಅಂಕಿ ಅಂಶಗಳನ್ನು ಅವರು ಕೇಳಿದ್ದಾರೋ ಅದು ಬಹುಶಃ ಕೊಡುವುದಕ್ಕೆ ಸಾಧ್ಯವಿಲ್ಲವೋ ಏನೋ ?

ಶ್ರೀ ಕಾಗೋಡು ತಿಮ್ಮಪ್ಪ —ಏಕೆ ?

ಶ್ರೀ ಎಂ.—ಮಲ್ಲಿಕಾರ್ಜುನಸ್ವಾಮಿ:—ಆ ಅಂಕಿ ಅಂಶಗಳ ಬಗ್ಗೆ ಮಾಹಿತಿಯನ್ನು ಸಾಧ್ಯವಾದಷ್ಟು ಎಲ್ಲ ಇಲಾಖೆಯವರು ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈಗಾಗಲೇ ಆ ಬಗ್ಗೆ ಕೆಲವು ಇಲಾಖೆಗಳು ಸಾಕಷ್ಟು ಮಾಹಿತಿಯನ್ನು ಕೊಟ್ಟಿವೆಯೆಂದು ಹೇಳಬಹುದು.

ಶ್ರೀ ಕೆ. ಸಿದ್ದಯ್ಯ —ಹಾಗಾದರೆ ನಾನು ಪ್ರಶ್ನೆ ಕೇಳಿರುವ ಹಾಗೆ ಆಯೋಗದವರು ಕೇಳಿರುವ ವಿವರಗಳನ್ನು ತಾವು ಅವರಿಗೆ ಒದಗಿಸಿಕೊಡುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದನ್ನು ಕೊಡುವುದಕ್ಕೆ ಸಾಧ್ಯವಿದೆ. ಆದರೆ ಬಹಳ ಕಾಲ ಹಿಡಿಯಬಹುದು.

SRI PRABHAKAR TELKAR.—Whether the Government is aware that there are several Departments that have not yet furnished a single information even though there were persistent requests from the Commission to furnish all the details that have been required ? Whether Government is aware and whether it has given any direction to those Departments to furnish the required information to the Commission ?

SRI M. MALLIKARJUNASWAMY.—It has come to the notice of the Government and they have also given circular instructions and instructed officers of all Departments to furnish the necessary information.

SRI PRABHAKAR TELKAR.—Whether it is possible for the Commission to submit the interim report without obtaining this information as there is delay from the Department and whether the Commission is going to submit the interim report without all these particulars ?

SRI M. MALLIKARJUNASWAMY.—I think they require this information to finalise their interim report.

ಶ್ರೀ ಕಾಗೋಡು ತಿಮ್ಮಪ್ಪ.—ಸಕಾಲದಲ್ಲಿ ಈ ಆಯೋಗಕ್ಕೆ ಎಲ್ಲ ಇಲಾಖೆಗಳಿಂದ ಸಾಕಷ್ಟು ಮಾಹಿತಿಯನ್ನು ಒದಗಿಸದೇ ಇರುವುದರಿಂದ ಈ ಆಯೋಗಕ್ಕೆ ಮೆಜಿಸ್ಟೀರಿಯಲ್ ಪವರ್ ಕೊಡಬೇಕೆಂದು ಕೇಳಿದ್ದಾರೆ. ಅದರ ಬಗ್ಗೆ ಸರ್ಕಾರದವರು ಏನು ತೀರ್ಮಾನ ಮಾಡಿದ್ದಾರೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದುವರೆಗೆ ಕೇವಲ ೬ ಇಲಾಖೆಗಳು ಮಾತ್ರ ಇನ್‌ಕಂಪ್ಲೀಟ್ ಇನ್‌ಫರ್‌ಮೇಷನ್ ಕೊಟ್ಟಿದೆ. ಎಲ್ಲ ಇಲಾಖೆಗಳು ಅದರ ಬಗ್ಗೆ ಸಾಕಷ್ಟು ಮಾಹಿತಿಯನ್ನು ಜಾಗ್ರತೆಯಾಗಿ ಒದಗಿಸುವುದಕ್ಕೆ ಸಾಧ್ಯವಿದೆಯೆಂಬುದಾಗಿ ಸರ್ಕಾರಕ್ಕೆ ಈಗಾಗಲೇ ವರದಿ ಬಂದಿದೆ. ಆದರೆ ಅವರು ಕೇಳಿರುವ ತಕ್ಕ ಇನ್‌ಫರ್‌ಮೇಷನ್ ಬಹಳ ಕಾಂಪ್ರಹೆನ್ಸಿವ್ ಇನ್‌ಫರ್‌ಮೇಷನ್ ಆದ್ದರಿಂದ ತಡವಾಗತಕ್ಕ ಸಂದರ್ಭವೂ ಇದೆ. ಅದರ ಜೊತೆಗೆ ಆಯೋಗದವರು ಮೆಜಿಸ್ಟೀರಿಯಲ್ ಪವರ್ ಕೊಡಬೇಕೆಂದು ಕೇಳಿದ್ದಾರೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈ ಪ್ರಶ್ನೆಯನ್ನು ಕೇಳಿರತಕ್ಕ ಮಾನ್ಯ ಸದಸ್ಯರಾದ ಶ್ರೀ ಕೆ. ಸಿದ್ದಯ್ಯನವರು ಬಹಳ ಖಚಿತವಾಗಿ ಇದರ ಬಗ್ಗೆ ಹೇಳಿದ್ದಾರೆ. ಮಾನ್ಯ ಮಂತ್ರಿಗಳು ೬ ಇಲಾಖೆಗಳು ಅವರು ಕೇಳಿರತಕ್ಕದ್ದನ್ನೆಲ್ಲಾ ಮಾಹಿತಿಯನ್ನು ಒದಗಿಸಲಿಲ್ಲವೆಂದು ಹೇಳಿದರು. ಆ ೬ ಇಲಾಖೆಗಳು ಯಾವುವು ?

SRI M. MALLIKARJUNASWAMY.—They are the Department of Public Instruction, the Department of Public Works, the Directorate of Health and Family Planning Services, the Directorate of Agriculture Mysore Government Secretariate and the Judical Department. ಈ ಆರು ಇಲಾಖೆಗಳು ಮಾತ್ರ ಈಗ ಮಾಹಿತಿಯನ್ನು ಕೊಟ್ಟಿದ್ದಾರೆ. ಅದೂ ಕೂಡ ಅಪೂರ್ಣವಾದ ಮಾಹಿತಿ.

ಶ್ರೀ ಎಂ. ಎಸ್. ಕೃಷ್ಣನ್.—೮ನೇ ಆಗಸ್ಟ್ ೧೯೭೨ರಲ್ಲಿ ಈ ಕಮಿಷನ್ನನ್ನು ರಚನೆ ಮಾಡಿ ೧೯೭೩ನೇ ಡಿಸೆಂಬರ್ ೩೧ರೊಳಗಾಗಿ ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕೆಂದು ತೀರ್ಮಾನವಾಗಿದ್ದರೂ, ೧೬ ಮೀಟಿಂಗ್‌ಗಳು ಈಗಾಗಲೇ ನಡೆದಿದ್ದರೂ ಇಂಟರಿಮ್ ರಿಪೋರ್ಟ್ ಇನ್ನೂ ಸರ್ಕಾರಕ್ಕೆ ಬಾರದೇ

ಇರುವುದರಿಂದ, ಅದು ಇಷ್ಟೊಂದು ಅಸಹಕಾರವನ್ನು ತೋರಿಸುತ್ತಾ ಇರುವುದರಿಂದ ಅದನ್ನು ಕೂಡಲೇ ಡಿಸ್‌ಬ್ಯಾಂಡ್ ಮಾಡಿ ಹೊಸ ಆಯೋಗವನ್ನು ರಚನೆಮಾಡುತ್ತೀರಾ ?

(ಉತ್ತರವಿಲ್ಲ)

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಸರ್ಕಾರದವರು ಒಂದು ಆಯೋಗವನ್ನು ರಚಿಸಿದ ಮೇಲೆ, ಅದಕ್ಕೆ ಬೇಕಾದಂಥ ಅಂಕಿ ಅಂಶಗಳ ಬಗ್ಗೆ ಸರಿಯಾದ ಮಾಹಿತಿಯನ್ನು ಎಲ್ಲ ಇಲಾಖೆಗಳಿಂದ ಒದಗಿಸ ಲಾಗಿಂತ್ತದೆಯೇ ಎಂಬುದನ್ನು ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯವಲ್ಲವೇ ? ಮತ್ತು ಈ ಸರ್ಕಾರ ದಲ್ಲಿ ಸುಮಾರು ೪–೫ ಲಕ್ಷ ಜನ ಉದ್ಯೋಗಿಗಳ ಬಗ್ಗೆ ಕಮಿಷನ್ನಿಗೆ ಅವರು ಕೇಳಿದ ಹಾಗೆ ಅಂಕಿ ಅಂಶ ಗಳನ್ನು ಸಂಬಂಧಪಟ್ಟ ಇಲಾಖೆಗಳು ಒದಗಿಸದೇ ಹೋದರೆ, ಇದರಿಂದ ಸಾರ್ವಜನಿಕರಿಗೂ ತೊಂದರೆ ಯಾಗುವುದಿಲ್ಲವೇ ? ಆದ್ದರಿಂದ ಈ ಕಮಿಷನ್ನಿಗೆ ಯಾವಾಗ ಮೆಜಿಸ್ಟೀರಿಯಲ್ ಪವರನ್ನು ಕೊಡುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದನ್ನು ಇಷ್ಟೇ ದಿವಸಗಳಲ್ಲಿ ಕೊಡುವುದಕ್ಕೆ ಆಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಸರ್ಕಾರದಲ್ಲಿ ಅದು ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಈ ಕಮಿಷನ್ನಿನವರು ೧೯೭೩ನೇ ಡಿಸೆಂಬರ್ ೩೧ರೊಳಗೆ ಸರ್ಕಾರಕ್ಕೆ ಅಂತಿಮ ವರದಿಯನ್ನು ಅರ್ಪಿಸದೇ ಇದ್ದರೆ, ಆ ಕಮಿಷನ್ನನ್ನು ಮುಂದುವರಿಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಎಲ್ಲಿಯವರೆಗೆ ಕಾಲಾವಕಾಶ ಬೇಕೆಂದು ಕಮಿಷನ್ನಿನವರು ಕೇಳುತ್ತಾರೋ, ಅದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಪರಿಶೀಲನೆಮಾಡಿ ವಿಸ್ತರಿಸ ಬೇಕಾಗುತ್ತದೆ.

ಶ್ರೀ ಕೆ. ಎನ್ ವೀರಪ್ಪಗೌಡ,—ಯಾವುದೇ ಕಮಿಷನ್ ನೀವು ರಚನೆಮಾಡಿದರೂ, ಅದಕ್ಕೆ ವರದಿ ಯನ್ನು ಸಲ್ಲಿಸಲು ಒಂದು ಕಾಲಾವಕಾಶವನ್ನು ನಿಗದಿಮಾಡಿದಮೇಲೆ, ಅದು ವರದಿಯನ್ನು ಸರ್ಕಾರಕ್ಕೆ ಸಲ್ಲಿಸದೆಹೋದರೆ, ಆದನ್ನೇ ಅನೇಕ ವರ್ಷಗಳ ಕಾಲ ಮುಂದುವರಿಸಿಕೊಂಡು ಹೋಗುವುದು ಸರಿಯೇ ? ನಿಮ್ಮ ಹತ್ತಿರ ಇಡಳಿತ ದಕ್ಷತೆ ಇಲ್ಲವೆಂದು ಅವರಿಗೆ ಇನ್ನೂ ಹೆಚ್ಚಿನ ಪವರ್ ಕೊಡಬೇಕೆಂದು ಯೋಚನೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದು ದಕ್ಷತೆ ಪ್ರಶ್ನೆಯಲ್ಲ. ಅವರು ಬಹಳ ವಿಸ್ತಾರವಾದ ಮಾಹಿತಿಯನ್ನು ಕೇಳಿರುವುದರಿಂದ, ಅದನ್ನೆಲ್ಲಾ ಅವರು ಸಂಗ್ರಹ ಮಾಡಬೇಕಾದರೆ ಸ್ವಾಭಾವಿಕವಾಗಿ ಬಹಳ ಕಾಲ ಹಿಡಿಯುತ್ತದೆ.

SRI S.M. YAHYA.—Is it a fact that adequate staff has not been given to the Commission which has led to this sort of delay in submitting the report and even a Secretary, or Deputy Secretary has not been posted ? Is it a fact ?

SRI M. MALLIKARJUNASWAMY.—It was so ; but it is not so now, because we have sanctioned the requisite staff.

ಶ್ರೀ ಕೆ. ಸಿದ್ದಯ್ಯ.—ಈ ಮಾಹಿತಿಪಡೆಯಲು ಬಹಳ ಕಾಲ ಹಿಡಿಯುತ್ತದೆಂದು ಹೇಳುವಾಗ, ಇದು ಬಹಳ ಪ್ರಾಮುಖ್ಯವಾದ ವಿಷಯವಾಗಿರುವುದರಿಂದ ಇದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಪಡೆ ಯುವುದಕ್ಕೆ ಅನುಕೂಲವಾಗುವಂತೆ ಸರ್ಕಾರ ಎಲ್ಲಾ ಇಲಾಖೆಗಳಿಗೂ ತಕ್ಕ ಸೂಚನೆಯನ್ನು ಇದರ ಬಗ್ಗೆ ಕೊಡುತ್ತಾರೆಯೇ ?

SRI M. MALLIKARJUNASWAMY.—We have already issued instructions and again instructions will be issued to the concerned Departments.

SRI PRABHAKAR TELKAR.—May I know whether the Backward Classes Commission will visit the District places before giving its interim report or will submit its interim report only on the basis of the statistics given by the Government ?

SRI M. MALLIKARJUNASWAMY.—I think it is left to the sweet will of the Commission.

APPLIED NUTRITION PROGRAMME AT SIRA

219. SRI T. TAREGOWDA (Kallambella).—Will the Minister for Community Development and Social Welfare be pleased to state.—

(*a*) whether Applied Nutrition Scheme (Applied Nutrition Programme) has been sanctioned to Sira Taluk which is drought affected taluk in the year 1972—73 ;

(*b*) if not, the steps taken by the Government to sanction Scheme as early as possible ?

SRI M MALLIKARJUNASWAMY (Minister for Community Development and Social Welfare).—

(*a*) No.

(*b*) Selection of blocks for the current year is already over. Sira taluk would be kept in view, while alloting fresh ANP blocks in future.

ಶ್ರೀ ಟಿ. ತಾರೇಗೌಡ.—ಸಿರಾ ತಾಲ್ಲೂಕ್ ಪದೇ ಪದೇ ಆಭಾವಕ್ಕೆ ತುತ್ತಾಗುತ್ತಿರುವುದರಿಂದ ಈ ಸ್ಕೀಮನ್ನು ಅಲ್ಲಿಗೆ ಕೊಡಬೇಕೆಂದು ಪದೇಪದೇ ತಾಲ್ಲೂಕ್ ಬೋರ್ಡಿನವರು ಕೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಬಂದಿದ್ದರೆ ಏ ಂದಿನ ಸಲವಾದರೂ ಕೊಡಲಾಗುತ್ತದೆಂಬ ಭರವಸೆ ಕೊಡುತ್ತೀರಾ?

†ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದು ಭರವಸೆ ಕೊಡುವ ಪ್ರಶ್ನೆಯಲ್ಲ. ಏಕೆಂದರೆ ಸಿರಾ ತಾಲ್ಲೂಕ್ ಒಂದೇ ಅಲ್ಲ, ಪದೇಪದೇ ಬರಗಾಲಕ್ಕೆ ತುತ್ತಾಗುತ್ತಿರುವುದು. ಈ ವರ್ಷ ೭ ಬ್ಲಾಕ್‌ಗಳಿಗೆ ಈ ಯೋಜನೆಗಳನ್ನು ಕೊಟ್ಟಿದ್ದೇವೆ. ಆದರೂ ಸಿರಾ ತಾಲ್ಲೂಕನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡುತ್ತದೆ.

ಶ್ರೀ ಟಿ. ತಾರೇಗೌಡ.—ಸಿರಾ ತಾಲ್ಲೂಕ್‌ನ ಬೇವಿನಹಳ್ಳಿಗೆ ತಾವು ಒಂದು ಸಮಾರಂಭಕ್ಕೆ ಬಂದಿದ್ದಾಗ ಮುಂದಿನ ಸಾರಿ ಈ ಯೋಜನೆಯನ್ನು ಖಂಡಿತವಾಗಿ ಕೊಡುತ್ತೇನೆಂದು ಭರವಸೆ ಕೊಟ್ಟಿರಲಿಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮುಂದಿನ ಸಲ ಕೊಡುತ್ತೇನೆಂದು ಹೇಳಿರುವುದನ್ನು ಪರಿಶೀಲನೆ ಮಾಡಲಾಗುತ್ತದೆ. ಕೇಂದ್ರ ಸರ್ಕಾರದವರಂ ೮ ಪ್ರೋಗ್ರಾಂಗಳನ್ನು ಕೊಟ್ಟಿದ್ದರು. ಅದನ್ನು ಕೊಟ್ಟಿದ್ದೇವೆ. ಪುನಃ ೧೯೭೪–೭೫ರಲ್ಲಿ ಕೇಂದ್ರ ಸರ್ಕಾರದವರು ಕೊಟ್ಟಾಗ, ಸಿರಾ ತಾಲ್ಲೂಕನ್ನು ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡುತ್ತೇವೆ.

COMMITTEE TO SELECT SITE FOR LOCATING NEW UNIVERSITY

250. SRI BAPU GOWDA RAYAPPA (Shahapur).— Will the Minister for Education be pleased to state.—

(*a*) whether the Government has constituted any committee to select the place or the location of the new university,

(*b*) if so, the plac recommended by the Committee,